(*a*) Yes.

(*b*) The work will be taken up subject to availablity of funds.

(*c*) Rs. 12.00 lakhs.

SRI M. M. SAJJAN —In view of the reply, whether the Government assures giving preference in providing funds for this bridge in view of the present necessity.

† SRI M. MALLIKARJUNASWAMY.—There may be necessity but not a pressing necessity. I tell this because there is anarch Bridges measurng 9 feet across Don river in Bijapur District. Only once or twice during the heavey rainy season this bridge gets submerged. Therefore, there is no pressing necessity but there is a necessity. That is why we have got the estimate ready and it will be looked into.

SRI M. M. SAJJAN.—Whether there are any reports on the file of the Government that there is no pressing necessity, but only a necessity. As I know during the rainy season traffic is blocked. Whether Government agrees with my suggestion ?

SRI M. MALLIKARJUNASWAMY.—I have already answered that question. There is a necessity but not a pressing necessity.

SRI M. M. SAJJAN.—Whether Government agrees that funds required for this bridge is small (Rs. 12 lakhs) ?

SRI M. MALLIKARJUNASWAMY.—This will be looked into.

SRI M. M. SAJJAN,—Whether the Government is pleased to tell the time limit as to when work will be taken up ?

SRI M. MALLIKAJUNASWAMY.—I cannot say.

Taking over of Taluk Board Dispensaries

166. SRI B. BHYRAPPAJI (Turuvekere).—Will the Minister for Health be pleased to state :—

(*a*) the number of health unit type of dispensaries run by the Taluk Boards in the State ;

(*b*) whether it is not a fact that the Government has decided to take over all the dispensaries run by the Taluk Boards owing to the unsatisfactory financial conditions of Taluk Boards ;

(*c*) if so, the reasons for not taking over the dispensaries so far by the Government ;

(*d*) the time by which the hospitials are to be taken over by Government as per their decisions ?

SRI H. M. CHANNABASAPPA (Minister for Health).—

(*a*) 195.

(*b*) The matter is still under consideration of Government.

(*c*) The question does not arise in view of the replies given above.

(*d*) do.

ಶ್ರೀ ಬಿ. ಬೈರಪ್ಪಾಜಿ (ಅ) ಪ್ರಶ್ನೆಗೆ ಉತ್ತರವಾಗಿ ೧೯೫ ಆಸ್ಪತ್ರೆಗಳಿವೆ ಎಂದು ಹೇಳಿದ್ದೀರಿ. (ಆ) ಪ್ರಶ್ನೆಗೆ ಉತ್ತರವಾಗಿ ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಈ ಸದನದಲ್ಲಿ ಮಾನ್ಯ ಸಿದ್ಧವೀರಪ್ಪನವರು ಆರೋಗ್ಯ ಮಂತ್ರಿಗಳಾಗಿದ್ದಾಗ ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆಂದು ಒಂದು ಸ್ಟೇಟ್‌ಮೆಂಟ್ ಕೂಡ ಮಾಡಿ ಸ್ಪಷ್ಟವಾಗಿ ಹೇಳಿದ್ದರು ಆ ಬಗ್ಗೆ ಸರ್ಕಾರ ಏಕೆ ಇನ್ನೂ ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.— ಸರ್ಕಾರ, ತಾಲ್ಲೂಕು ಬೋರ್ಡ್ ಆಸ್ಪತ್ರೆಗಳನ್ನು ಮೆಯಿಂಟೆನ್ಸಿಗೋಸ್ಕರ ತೆಗೆದುಕೊಳ್ಳಬೇಕೆಂದು ಯೋಚನೆಮಾಡಿ ಭರವಸೆ ಕೊಟ್ಟಿರುವುದು ನಿಜ. ಅವುಗಳನ್ನು ತೆಗೆದುಕೊಳ್ಳುವುದರಿಂದ ಅವುಗಳ ಮೆಯಿಂಟೆನ್ಸಿಗೆ ಎಷ್ಟು ಹಣ ಖರ್ಚಾಗುತ್ತದೆ ಎಂಬ ಪ್ರಶ್ನೆ ಬರುತ್ತದೆ. ಇದೇ ರೀತಿ ಮುನಿಸಿಪಾಲಿಟಿಗಳು ನಡೆಸತಕ್ಕ ಅನೇಕ ಆಸ್ಪತ್ರೆಗಳು ಸಹ ಇವೆ. ಅವುಗಳನ್ನೆಲ್ಲ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದರಿಂದ ಏನೇನು ಪರಿಣಾಮಗಳಾಗುತ್ತವೆ ಮತ್ತು ಯಾವ ರೀತಿ ಮಾಡಬೇಕೆಂಬ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.— ತಾಲ್ಲೂಕು ಬೋರ್ಡ್‌ಗಳ ಆರ್ಥಿಕ ಸ್ಥಿತಿ ಈಗ ಚಿಂತಾಜನಕವಾಗಿದೆ. ಅವಕ್ಕೆ ಸರ್ಕಾರದಿಂದ ಯಾವ ವಿಧವಾದ ನೆರವೂ ಕೂಡ ದೊರೆಯುತ್ತಿಲ್ಲ. ಒಂದೆರಡು ಕಡೆ ತಾಲ್ಲೂಕು ಬೋರ್ಡ್ ದಿವಾಳಿಯಾಗಿರುವುದರಿಂದ ಆಸ್ಪತ್ರೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ತಾಲ್ಲೂಕು ಬೋರ್ಡ್‌ಗಳಿಗೂ ಬರತಕ್ಕ ಆದಾಯ ನಿಂತುಹೋಗಿದೆ. ಕೆಲವು ಕಡೆ ಸಂಬಳ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಸಂದರ್ಭದಲ್ಲಿ ಹೆಚ್.ಯು.ಟಿ.ಡಿ. ಆಸ್ಪತ್ರೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಈಗಾಗಲೇ ತೀರ್ಮಾನಿಸಿರುವುದರಿಂದ ಆ ಆಸ್ಪತ್ರೆಯನ್ನು ಅದಷ್ಟು ಬೇಗ ಸರ್ಕಾರವಹಿಸಿಕೊಂಡು ಉತ್ತಮ ವ್ಯವಸ್ಥೆಯನ್ನು ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡುತ್ತಿರಾ?

ಶ್ರೀ ಎಚ್. ಎಂ ಚನ್ನಬಸಪ್ಪ.— ತಾಲ್ಲೂಕು ಬೋರ್ಡುಗಳ ಹಣಕಾಸಿನ ಪರಿಸ್ಥಿತಿ ಚಿಂತಾಜನಕವಾಗಿದೆ ಮತ್ತು ಆಸ್ಪತ್ರೆಗಳಿಗೆ ಔಷಧೋಪಚಾರಗಳ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ನಿಶ್ಶಕ್ತವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಅದನ್ನು ಗಮನದಲ್ಲಿ ಇಟ್ಟುಕೊಂಡೆ ತಾಲ್ಲೂಕು ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು ಎಲ್ಲೆಲ್ಲಿ ದುಸ್ಥಿತಿಯಲ್ಲಿದ್ದುಕೊಂಡು ಆಸ್ಪತ್ರೆಗಳನ್ನು ನಡೆಸುತ್ತಿವೆ ಅಂಥ ಆಸ್ಪತ್ರೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂಬ ವಿಷಯವನ್ನು ಯೋಚಿಸುತ್ತಿದ್ದೇವೆ ಮತ್ತು ಯಾವ ಯಾವ ಆಸ್ಪತ್ರೆಗಳನ್ನು ತೆಗೆದುಕೊಳ್ಳಬೇಕು ಮತ್ತು ಎಷ್ಟು ಹಣ ಖರ್ಚಾಗುತ್ತದೆಂಬುದನ್ನು ಸಹ ಪರಿಶೀಲನೆ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಈ ಬಗ್ಗೆ ಬೇಗ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಐ. ಜಿ. ಸನದಿ — ಈಗ ತಾಲ್ಲೂಕು ಬೋರ್ಡು ಆಸ್ಪತ್ರೆಗಳನ್ನು ಸರ್ಕಾರ ವಹಿಸಿಕೊಳ್ಳಲಿಕೆ ಆಲೋಚನೆ ಮಾಡುತ್ತಿದೆ ಎಂದು ಹೇಳಿದಿರಿ ಅದೇ ರೀತಿ ಕಾರ್ಪೊರೇಷನ್‌ಗಳು ಮತ್ತು ಟೌನ್ ಮುನಿಸಿಪಾಲಿಟಿಗಳು ನಡೆಸತಕ್ಕ ಆಸ್ಪತ್ರೆಗಳನ್ನು ವಹಿಸಿಕೊಂಡು ಆಸ್ಪತ್ರೆಗಳ ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಕಾರ್ಯಕ್ರಮವನ್ನು ರೂಪಿಸುತ್ತೀರಾ?

ಅಧ್ಯಕ್ಷರು.— ಅದು ಬೇರೆ ಪ್ರಶ್ನೆಯಾಯಿತು.

ಶ್ರೀ ಹೆಚ್. ಎಂ. ಚನ್ನಬಸಪ್ಪ.— ನಾನು ಹೇಳುವುದೇನೆಂದರೆ, ತಾಲ್ಲೂಕು ಬೋರ್ಡ್ ಮತ್ತು ಮುನಿಸಿಪಾಲಿಟಿಗಳು ಎಲ್ಲೆಲ್ಲಿ ದುಸ್ಥಿತಿಯಲ್ಲಿವೆ ಮತ್ತು ಅದಕ್ಕೆ ಕಾರಣ ಏನೆಂಬುದನ್ನು ಯೋಚನೆಮಾಡಿ, ಅವುಗಳಿಗೆ ತಮ್ಮ ಹಣಕಾಸಿನ ಪರಿಸ್ಥಿತಿಯಿಂದ ನಡೆಸುವುದಕ್ಕೆ ಸಾಧ್ಯವಿಲ್ಲ ಎಂಬುದು ಕಂಡುಬಂದ ಮೇಲೆ

ಅಂಥ ಆಸ್ಪತ್ರೆಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದೆಂದು ಹಿಂದಿನ ಮಂತ್ರಿಗಳು ಹೇಳಿದ್ದರು. ಅದನ್ನು ಈಗ ಅನುಷ್ಠಾನಕ್ಕೆ ತರುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದಕೆ ಪರಿಶೀಲಿಸುತ್ತಿದ್ದೇವೆ.

ಶ್ರೀ ಮತಿ ದಮಯಂತಿ ಬೋರೇಗೌಡ.— ಈ ಸಮಸ್ಯೆಗಳು ತೀವ್ರವಾಗಿರುವುದರಿಂದ ಅಂಥ ಪ್ರದೇಶಗಳಲ್ಲಿ ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್ ಎಂ. ಚನ್ನಬಸಪ್ಪ.— ಆಸ್ಪತ್ರೆಗಳು ಇಲ್ಲದೇ ಇರುವ ಕಡೆ ಹೊಸ ಆಸ್ಪತ್ರೆಗಳನ್ನು ಮಂಜೂರ್ಮಾಡಬೇಕೆ ಹೊರತು ಆಸ್ಪತ್ರೆಗಳಿರುವ ಕಡೆ ಹೊಸ ಆಸ್ಪತ್ರೆಗಳು ಬೇಕಾಗಿಲ್ಲ.

ಶ್ರೀ ಶರಣಪ್ಪ.— ಈಗ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಿರಿ ಆದರೆ ಅವುಗಳನ್ನು ಸರ್ಕಾರದ ವಶಕ್ಕೆ ಯಾವಾಗ ತೆಗೆದುಕೊಳ್ಳುತ್ತೀರಿ ಮತ್ತು ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಹೇಳುತ್ತೀರಾ? ಪ್ರತಿ ಹಳ್ಳಿಯಲ್ಲೂ ಹೆಲ್ತ್ ಸೆಸ್ ಎಂದು ವಸೂಲ್ಮಾಡುತ್ತಿದ್ದೀರಿ. ತಾಲ್ಲೂಕು ಬೋರ್ಡಿನಲ್ಲಿ ಹಣ ಇಲ್ಲದೆ ಆಸ್ಪತ್ರೆಗಳು ಹೇಗೆ ನಡೆಯುತ್ತಿವೆ ಈ ಬಗ್ಗೆ ಆಶ್ವಾಸನೆ ನೀಡಿ ಈ ಗಾಗಲೇ ಒಂದು ವರ್ಷವಾಯಿತಾದರು ಇನ್ನೂ ಕಾರ್ಯಗತವಾಗಿಲ್ಲ ಅದಕಾರಣ ಯಾವ ಕಾಲದಲ್ಲಿ ಎಷ್ಟು ತಿಂಗಳೊಳಗಾಗಿ ಈ ಕಾರ್ಯವನ್ನು ಕಾರ್ಯಗತ ಮಾಡುತ್ತೀರೆಂಬ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಆ ಬಗ್ಗೆ ತೀವ್ರಗತಿಯಿಂದ ಆಲೋಚನೆ ಮಾಡುತ್ತಿದ್ದೇವೆ. ಬಹುಶ; ಒಂದೆರಡು ವಾರಗಳಲ್ಲಿ ಆ ವಿಚಾರ ಕ್ಯಾಬಿನೆಟ್ ಮುಂದೆ ಬಂದು ತೀರ್ಮಾನವಾಗಲಿದೆ.

Temples under control of Government

180 SRI K. SIDDAIAH (Santhemarahalli).— Will the Minister for Revenue be pleased to state.—

(*a*) the total number of temples that come under the control and administration of Government: the total revenue from all sources of those temples and expenditure incurred by those temples for the years 1973-74, 1974-75 and the number of persons employed in those temples:

(*b*) out of them, the total number of temples in Mysore District and the Revenue (from all sources) and expenditure for the years 1973-74 and 1974-1975, the number of persons employed;

(*c*) the total No. of Major temples in Mysore District, their names, their Revenue and expenditure for 1973-74 and 1974-75 and the number of persons employed;

(*d*) whether it is a fact that some of the employees of those temples are paid more then salary for different work or service in the same temple;

(*e*) whether there is any fund earmarked out of the revenues of the temples for providing amenities to the pilgrims;

(*f*) whether the members of any caste among the Hindus are eligible for appointment in the services of the temples?

SRI N. HUTCHMASTHY GOWDA (Minister for Revenue).—

(*a*) Total No of temples ... 25,531

Total revenue and expenditure of those temples:

	Revenue	*Expenditure*
1973-74	Rs. 1,94,29,923,-28	Rs. 1,78,19,932-33